ಚುಟುಕು ಸುದ್ದಿ

ಅಗಸೂರಿನಲ್ಲಿ ಚಂದನ ಕ್ಲಿನಿಕ್ ಉದ್ಘಾಟನೆ

ಅಂಕೋಲಾ: ಅಗಸೂರು ಗ್ರಾಮದಲ್ಲಿ ನಾಗರಿಕರಿಗೆ ಒಂದು ಆಸ್ಪತ್ರೆಯ ಅಗತ್ಯತೆ ಇತ್ತು. ಯುವ ವೈದ್ಯೆ ಡಾ. ಮಂದಾರ ಗ್ರಾಮೀಣ ಪ್ರದೇಶದಲ್ಲಿ ಕ್ಲಿನಿಕ್ ಆರಂಬಿಸಿದ್ದು ಸ್ಲಾಘನೀಯವಾದದ್ದು, ಇದು ಮುಂದಿನ ದಿನಗಳಲ್ಲಿ ಚೆನ್ನಾಗಿ ನಡೆದು ಇಲ್ಲಿಯ ಬಡ ರೋಗಿಗಳ ಪಾಲಿಗೆ ಉಪಯೋಗ ವಾಗಲೆಂದು ಅಗಸೂರು ಗ್ರಾಮ ಪಂಚಾಯತ್ ಅಧ್ಯಕ್ಷರು ಆಶಿಸಿದರು. ಅವರು ಶನಿವಾರ ಚಂದನ ಕ್ಲಿನಿಕ್ ಉದ್ಘಾಟಿಸಿ ಮಾತನಾಡುತ್ತಿದ್ದರು.

ಅತಿಥಿಗಳಾಗಿ ಆಗಮಿಸಿದ ಡಾ. ವಿಕಾಸ ನಾಯಕ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಸೇವೆ ಜನರಿಗೆ ಸಿಗುವುದು ಅವಶ್ಯವಿದೆ.ಡಾ. ಈ ವಿಚಾರ ಮಾಡಿರುವುದು ಒಳ್ಳೆಯ ವಿಚಾರವೆಂದರು.

ಅಗಸೂರು ಗ್ರಾ.ಪಂ. ಉಪಾಧ್ಯಕ್ಷ ತುಳುಸು ಗೌಡ, ಸದಸ್ಯರಾದ ರಾಮಚಂದ್ರ ನಾಯ್ಕ, ಆನಂದು ಗೌಡ, ಮಂಜು ಗೌಡ, ಶೋಭಾ ಗೌಡ, ಪಿ.ಎಸ್.ಎಸ್. ಅಧ್ಯಕ್ಷ ಗೋಪಾಲಕೃಷ್ಣ ನಾಯಕ, ತಾಲ್ಲೂಕು ಯುವ ಒಕ್ಕೂಟದ ಅಧ್ಯಕ್ಷ ಗೋಪು ನಾಯಕ, ರೈತ ಮುಖಂಡರಾದ ಶಾಂತಾರಾಮ ನಾಯಕ, ಗೌರೀಶ ನಾಯಕ, ಅಲಗೇರಿ ಗ್ರಾ.ಪಂ. ಅಧ್ಯಕ್ಷರಾದ ಸಂತೋಷ ನಾಯ್ಕ, ಹಿರಿಯರಾದ ದೇವಾನಂದ ಗಾಂವ್ಕರ, ಊರ ಪ್ರಮುಖರಾದ ರಾಜೇಶ್ ನಾಯಕ, ಕೇಶವ ನಾಯಕ, ರೋಹಿದಾಸ ನಾಯಕ, ಮಂಜುನಾಥ ನಾಯಕ ಆಂಧ್ಲೆ, ಮತ್ತು ಕುಟುಂಬದ ಸದಸ್ಯರು, ಊರ ನಾಗರಿಕರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಶ್ರೀನಿಧಿ ಸೇವಾ ವಾಹಿನಿಯಿಂದ ಪ್ರತಿಭಾ ಪುರಸ್ಕಾರ

ಹೊನ್ನಾವರ: ಬಾಳೆಗದ್ದೆಯ ಶ್ರೀನಿಧಿ ಸೇವಾ ವಾಹಿನಿ ವತಿಯಿಂದ ಗಾಣಿಗ ಸಮಾಜದ ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಣೆ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ತಾಲೂಕಿನ ಬಾಳೆಗದ್ದೆ ಶ್ರೀ ವೆಂಕ್ಕಟಮಣ ಸಭಾಭವನದಲ್ಲಿ ನಡೆಯಿತು.

ಪ್ರಾಚಾರ್ಯ ನಾಗೇಶ ಶೆಟ್ಟಿ ಕಾರ್ಯಕ್ರಮ ಉದ್ಘಾಟಿಸಿ ಮತನಾಡಿ, ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಿ ಸಾಧನೆ ಮಾಡಬೇಕು ಎಂದರು.

ನಿವೃತ್ತ ಯೂನಿಯನ್ ಬ್ಯಾಂಕ್ ನೌಕರ ಮೋಹನ ಶೆಟ್ಟಿ ಮಾತನಾಡಿದರು. ಎಸ್ಎಸ್ಎಲ್‌ಸಿ ಹಾಗೂ ಪಿಯುಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಮಾಜದ ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಿಸಲಾಯಿತು. ಸಂಘಟನೆಯ ಅಧ್ಯಕ್ಷ ಕೇಶವ ಶೆಟ್ಟಿ, ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ಎಸ್.ಕೆ.ಶೆಟ್ಟಿ, ಛಾಯಗ್ರಾಹಕ ಕಿರಣ ಶೆಟ್ಟಿ, ಅಂಚೆ ಇಲಾಖೆ ನಿವೃತ್ತ ನೌಕರ ಜನಾರ್ದನ ಶೆಟ್ಟಿ, ಸಂಘದ ಉಪಾಧ್ಯಕ್ಷ ಸಂದೇಶ ಶೆಟ್ಟಿ, ಕಾರ್ಯದರ್ಶಿ ರವಿ ಶೆಟ್ಟಿ, ಮಹೇಶ ಶೆಟ್ಟಿ, ಬಿ.ಆರ್.ಶೆಟ್ಟಿ ಉಪಸ್ಥಿತರಿದ್ದರು.

UK Since 1997 ಉದಯಕಾಲ
ಅನಿಕೇತನ ಪಬ್ಲಿಕೇಷನ್ ಅಂಡ್ ಪ್ರಿಂಟರ್ಸ್
730/A-1, 'ವೃದ್ಧಿ' 2ನೇ ಮಹಡಿ, ನಾಗರಭಾವಿ 2ನೇ ಹಂತ,11ನೇ ಬ್ಲಾಕ್, ಬೆಂಗಳೂರು- 560072.
080 - 29558575
ಉತ್ತರಕನ್ನಡ ಜಿಲ್ಲೆಯ ಸುದ್ದಿ ಹಾಗೂ ಜಾಹಿರಾತುಗಳಿಗಾಗಿ ಸಂಪರ್ಕಿಸಿ
ಬಿ.ವಿ.ಹುಲಿಗೇಶ್ : 8861520148
ಜಿಲ್ಲಾ ವರದಿಗಾರರು ಹಾಗೂ ಜಿಲ್ಲಾ ಜಾಹಿರಾತು ವಿಭಾಗ

ಮತ್ತೆ ವಿವಾದಗಳಿಂದ ಸುದ್ದಿಯಾದ ಪುರಸಭೆ ಮುಖ್ಯಾಧಿಕಾರಿ..!

ಸರ್ವಾಧಿಕಾರಿ ಧೋರಣೆ, ಪುರಸಭೆ ಮುಖ್ಯಾಧಿಕಾರಿ, ಇಂಜಿನಿಯರ್ ವರ್ಗಾಯಿಸುವಂತೆ ಸದಸ್ಯರ ಪಟ್ಟು

ಉದಯಕಾಲ ನ್ಯೂಸ್

ಅಂಕೋಲಾ: ಕಳೆದ ಕೆಲವು ತಿಂಗಳುಗಳಿಂದ ವಿವಾದಗಳಲ್ಲಿ ಸುದ್ದಿಯಾಗಿದ್ದ ಅಂಕೋಲಾ ಪುರಸಭೆಯ ಮುಖ್ಯಾಧಿಕಾರಿ ಹಾಗೂ ಇಂಜಿನಿಯರ್ ಅವರ ಸರ್ವಾಧಿಕಾರಿ ಧೋರಣೆಯಿಂದ ಬೇಸತ್ತ ಪುರಸಭೆಯ ಸರ್ವಪಕ್ಷದ ಬಹುತೇಕ ಸದಸ್ಯರು ಅಧಿಕಾರಿಗಳನ್ನು ವರ್ಗಾಯಿಸುವಂತೆ ಆಗ್ರಹಿಸಿದ್ದಾರೆ.

ಮುಖ್ಯಾಧಿಕಾರಿ ಹಾಗೂ ಕಿರಿಯ ಇಂಜಿನಿಯರ್ ಅವರ ಸರ್ವಾಧಿಕಾರಿ ಧೋರಣೆ ಮತ್ತು ಕಾಮಗಾರಿಯ ಆರಂಭ ಮತ್ತು ಮುಕ್ತಾಯದ ಹಂತದಲ್ಲಿ ಸದಸ್ಯರ ಗಮನಕ್ಕೆ ತರದೆ, ಸದಸ್ಯರ ಆಕ್ಷೇಪಣೆ ನಡುವೆಯೂ ಬಿಲ್ ಮಾಡಿರುವುದು ಮತ್ತೊಮ್ಮೆ ಆಡಳಿತ ಮಂಡಳಿಯ ವಿರೋಧಕ್ಕೆ ಕಾರಣವಾಗಿದ್ದು, ಇದರಿಂದ ಬೇಸತ್ತು ಅಂಕೋಲಾ ಪುರಸಭೆಯ 23 ಸದಸ್ಯರ ಪೈಕಿ 18 ಸದಸ್ಯರ ಸರ್ವಪಕ್ಷ ನಿಯೋಗ ಈಗ ಅಧಿಕಾರಿಗಳನ್ನು ವರ್ಗಾವ ಣೆ ಮಾಡುವಂತೆ ಕೋರಿ ಕರ್ನಾಟಕ ರಾಜ್ಯ ಪೌರಾಡಳಿತ ನಿರ್ದೇಶಕರಾದ ಪ್ರಭುಲಿಂಗ ಕವಳಕಟ್ಟಿಯವರಿಗೆ ಮನವಿ ಮಾಡಿದ್ದರು ಎನ್ನಲಾಗಿದೆ. ಈ ಕುರಿತು ತಕ್ಷಣ ಕಾರ್ಯಪ್ರವೃತ್ತರಾದ ಅವರು ಅರ್ಜಿ ಯ ವಿಚಾರಣೆಗೆ ಉತ್ತರ ಕನ್ನಡ ಜಿಲ್ಲಾ ಯೋಜನಾಧಿಕಾರಿಗಳಿಗೆ ಪರಿಶೀಲಿಸಿ ತಕ್ಷಣ ವರದಿ ನೀಡುವಂತೆ ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಮಂಗಳವಾರ ಆಗಮಿಸಿದ ಉತ್ತರ ಕನ್ನಡ ಜಿಲ್ಲಾ ಯೋಜನಾಧಿಕಾರಿ ಸರ್ವಪಕ್ಷದ ಸದಸ್ಯರನ್ನು ಕರೆದು ಆರೋಪಗಳ ಕುರಿತು ವಿಚಾರಣೆ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ಎಚ್ ಆಕ್ಷತಾ ಹಾಗೂ ಕಿರಿಯ ಅಭಿಯಂತರರಾದ ಶೆಲ್ಜಾ ನಾಯ್ಕ ಅವರ ಮೇಲಿನ ಆರೋಪಗಳ ಕುರಿತು ದಾಖಲೆ ಸಹಿತ ಪುರಸಭೆ ಅಧ್ಯಕ್ಷ, ಉಪಾಧ್ಯಕ್ಷೆಯರ ಸೇರಿದಂತೆ ಆಡಳಿತ ಮತ್ತು ವಿರೋಧ ಪಕ್ಷದ ಒಟ್ಟಾರೆ 18 ಸದಸ್ಯರು ಯೋಜನಾಧಿಕಾರಿಗಳ ಗಮನಕ್ಕೆ ತಂದಿದ್ದಾರೆ ಎನ್ನಲಾಗಿದೆ. ಮುಖ್ಯಾಧಿಕಾರಿ ಹಾಗೂ ಕಿರಿಯ ಅಭಿಯಂತರರನ್ನು ವರ್ಗಾವಣೆ ಮಾಡದೇ ಇದ್ದರೆ ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ ಎನ್ನಲಾಗಿದೆ.

ಅಧಿಕಾರಿಗಳಿಂದ ಮತ್ತೊಂದು ವಿವಾದ: ಈಗಾಗಲೇ ವಿವಿಧ ಆರೋಪಗಳನ್ನು ಎದುರಿಸುತ್ತಿದ್ದರೂ ಅಧಿಕಾರಿಗಳು ಬುದ್ಧಿ ಕಲಿಯದೇ ಪುರಸಭೆ ವ್ಯಾಪ್ತಿಯ ಎಸ್.ಎನ್.ಟಿಯಿಂದ ಹಿಂದೂ ಸ್ಮಶಾನ ಭೂಮಿಯಲ್ಲಿ ಆಡಳಿತ ಮಂಡಳಿಯ ಗಮನಕ್ಕೂ ತಾರದೇ, ಸಮಾಜದ ಪ್ರಮುಖರ ಸಲಹೆ ಪಡೆಯ ದೆ ಇಬ್ಬಾಗವಾಗುವ ರೀತಿಯಲ್ಲಿ ರಸ್ತೆ ಮಾಡಿರು ವುದು ಸದಸ್ಯರ ಆಕ್ರೋಶಕ್ಕೆ ಕಾರಣವಾಗಿದ್ದು ಸದಸ್ಯರು ಪೌರಾಡಳಿತ ಇಲಾಖೆಗೆ ದೂರಿದ್ದಾರೆ.

ಗುರುವಾರ ಪರಿಸರ ದಿನಾಚರಣೆಯಿದ್ದು ವಿಶಾಲ ಸ್ಮಶಾನ ಭೂಮಿಯಲ್ಲಿ ಗಿಡ ನೆಡಲು ಆಡಳಿತ ಮಂಡಳಿ ಯೋಜನೆ ನಡೆಸಿದ್ದು ಮಂಗಳವಾರ ಸಂಜೆ ಸ್ಮಶಾನ ಭೂಮಿಗೆ ಕಾಲಿಡುತ್ತಿದ್ದಂತೆ ಸದಸ್ಯರು ದಿಗ್ಭ್ರಮೆಗೊಂಡಿದ್ದಾರೆ. ಹಿಂದಿನ ಅಧ್ಯಕ್ಷರು, ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸದಸ್ಯರು ಸೇರಿದಂತೆ ಸ್ಮಶಾನ ಭೂಮಿಯಲ್ಲಿ ನೆಟ್ಟ ಗಿಡ-ಮರಗಳನ್ನು ಅಧಿಕಾರಿಗಳು ನೆಲಸಮಗೊಳ್ಳುವಂತೆ ಮಾಡಿದ್ದಾರೆ ಎನ್ನಲಾಗಿದೆ. ಸುಮಾರು ಎಂಟು ವರ್ಷಗಳ ಹಿಂದಿನ ಮರ ಕೂಡ ಅಧಿಕಾರಿಗಳ ದುರ್ವರ್ತನೆಗೆ ನೆಲಕ್ಕುರುಳಿದೆ. ಮರಗಳ ಮರಣ ಹೋಮ ಪರಿಸರ ದಿನಾಚರಣೆಯ ಸನಿಹದಲ್ಲಿಯೇ ಆಗಿರುವುದರಿಂದ ಸಾರ್ವಜನಿಕ ವಲಯದಲ್ಲಿ ಆಕ್ರೋಶ ವ್ಯಕ್ತವಾಗಿದ್ದು ಅರಣ್ಯ ಇಲಾಖೆಯ ಪರವಾನಿಗೆ ಪಡೆಯ ಲಾಗಿದೆಯೇ? ಗಿಡಗಳನ್ನು ಉಳಿಸಬೇಕು ಇಲ್ಲವೇ ಉರುಳಿಸಬೇಕೋ? ಎಂದು ಪ್ರಶ್ನಿಸುವಂತಾಗಿದೆ.

ಮುಖ್ಯಅಧಿಕಾರಿಗಳ ಮೇಲಿನ ಆರೋಪಗಳೇ ನು?; ಇಲ್ಲಿನ ಪುರಸಭೆಯ ಮುಖ್ಯಾಧಿಕಾರಿಗಳ ಮೇಲೆ ಹಲವು ಆರೋಪಗಳಿರುವುದರಿಂದ ಇಲಾಖೆ ವಿಚಾರಣೆ ನಡೆಯುತ್ತಿದೆ ಎನ್ನಲಾಗಿದೆ. ಅಧಿಕಾರ ದುರುಪಯೋಗ, ಭ್ರಷ್ಟಾಚಾರ ಮತ್ತು ಹಿರಿಯ ನಾಗರಿಕರೊಂದಿಗೆ ದುರ್ವರ್ತನೆ ಸೇರಿದಂತೆ ಗಂಭೀರ ಆರೋಪಗಳು ಕೇಳಿ ಬಂದಿವೆ. ಇತ್ತೀಚೆಗೆ ಕಾರು ದುರ್ಬಳಕೆಯ ಕುರಿತು ಸುದ್ದಿಯಾಗಿದ್ದು ಖಾಸಗಿ ಕಾರಿಗೆ ಪುರಸಭೆಯ ಮುಖ್ಯ ಅಧಿಕಾರಿ ಎನ್ನುವ ಸರ್ಕಾರಿ ನಾಮಫಲಕ ಅಳವಡಿಕೆ ಮಾಡಿದ್ದರ ಕುರಿತು ಆರ್‌ಟಿಓ ಅಧಿಕಾರಿಗಳು ಖಚಿತಪಡಿಸಿದ್ದರು.

ನಿವೃತ್ತ ಶಿಕ್ಷಕರನ್ನು ಗೌರವಿಸಿ, ಬೀಳ್ಕೊಟ್ಟ ಕಾರ್ಯ ಸಂತಸ ತಂದಿದೆ: ಲತಾ ನಾಯಕ

ಉದಯಕಾಲ ನ್ಯೂಸ್

ಅಂಕೋಲಾ: ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕ ಅಂಕೋಲಾದ ವತಿಯಿಂದ ನಗರದ ನಂಬರ್ 1 ಶಾಲೆಯಲ್ಲಿ ಹಮ್ಮಿಕೊಳ್ಳಲಾದ ವಿಶ್ರಾಂತ ಶಿಕ್ಷಕರನ್ನು ಬೀಳ್ಕೊಡಲಾಯಿತು.

ವಿಶ್ರಾಂತ ಶಿಕ್ಷಕರನ್ನು ಸನ್ಮಾನಿಸಿ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಉತ್ತರ ಕನ್ನಡ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಲತಾ ಎಮ್ ನಾಯಕರವರು ವಿಶ್ರಾಂತ ಜೀವನವನ್ನು ಒತ್ತಡರಹಿತವಾಗಿ ಶಿಕ್ಷಕರು ಕಳೆಯಬೇಕು.

ಜೀವನ ಇರುವುದು ಸವಿಯಲೇ ಹೊರತು ಸವೆಸಲು ಅಲ್ಲ. ಹಲವು ದಶಕಗಳ ಕಾಲ ಶಿಕ್ಷಕರಾಗಿ ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನದ ಬೆಳಕನ್ನು ನೀಡಿ ಸಾರ್ಥಕ ಸೇವೆಯನ್ನು ಇಲಾಖೆಯಲ್ಲಿ ಸಲ್ಲಿಸಿದ್ದೀರಿ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕ ಅಂಕೋಲಾದ ಮೂಲಕ ಅತ್ಯಂತ ಗೌರವದಿಂದ ನಿಮ್ಮನ್ನು ಸನ್ಮಾನಿಸಿ ಬೀಳ್ಕೊಡಲು ಸಂತಸವಾಗುತ್ತಿದೆ. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕದ ಈ ಕಾರ್ಯ ಶ್ಲಾಘನೀಯ ವಾದುದು ಎಂದರು.

ಸನ್ಮಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಆರೋಗ್ಯಕರ ಹವ್ಯಾಸಗಳನ್ನು ಇನ್ನಷ್ಟು ಬೆಳೆಸಿಕೊಳ್ಳಬೇಕು. ತಮ್ಮ ಸೇವೆಯನ್ನು ಇಲಾಖೆ ಸ್ಮರಿಸುತ್ತದೆ ಎಂದರು.

ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದ ಕುಮಟಾ ಡಯಟ್‌ನ ವಿಶ್ರಾಂತ ಪ್ರಾಚಾರ್ಯ ಶ್ರೀ ಎನ್.ಜಿ. ನಾಯಕ ಮಾತನಾಡಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಘಟಕದ ಅಧ್ಯಕ್ಷ ಜಗದೀಶ ಜಿ ನಾಯಕ ಹೊಸ್ಕೇರಿ ಪ್ರಾಸ್ತಾವಿಕವಾಗಿ ಮಾತನಾಡಿ ಶಿಕ್ಷಕರ ಸೇವೆಯನ್ನು ಸ್ಮರಿಸಿದರು.

ಬಾಲಚಂದ್ರ ಎನ್ ನಾಯಕ ಶಿಕ್ಷಕರು,ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಬ್ರುವಾಡ. ಸುರೇಶ ಪಿ ಆಗೇರ ಮುಖ್ಯಾಧ್ಯಾಪಕರು ಸ. ಹಿ. ಪ್ರಾ. ಶಾಲೆ ಶಿರಕುಳಿ. ಪಾರ್ವತಿ ಟಿ ನಾಯಕ ಶಿಕ್ಷಕಿ ಸ.ಹಿ ಪ್ರಾ ಶಾಲೆ ತಾಳೇಬೈಲ್, ಗೀತಾ ಜಿ ನಾಯಕ ಶಿಕ್ಷಕಿ ಸ ಹಿ ಪ್ರಾಶಾಲೆ ಕಾರೆಬೈಲ್. ಲಕ್ಷ್ಮೀ ವಿ ನಾಯಕ ಸ ಹಿ ಪ್ರಾ ಶಾಲೆ ಕುಂಟಕಣಿ. ಜಯಲಕ್ಷ್ಮಿ ಬಿ ನಾಯಕ ಶಿಕ್ಷಕಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಬಾಸಗೋಡ. ಭವಾನಿ ಎಚ್ ನಾಯಕ ಶಿಕ್ಷಕಿ ಸ ಹಿ ಪ್ರಾ ಶಾಲೆ ಅಜ್ಜಿಘಟ್ಟಾ, ಸಂಜೀವ ರಾಮ ನಾಯಕ ಶಿಕ್ಷಕರು ಸ ಕಿ ಪ್ರಾ ಶಾಲೆ ತಾರಿಬೊಳೆ, ಚಂದ್ರಕಾಂತ ಟಿ ಗೌಡ ಶಿಕ್ಷಕರು ಸ ಹಿ ಪ್ರಾ ಶಾಲೆ ಬೊಗ್ರಿಗದ್ದೆ ಇವರುಗಳನ್ನು ಸನ್ಮಾನಿಸಿ, ಗೌರವಿಸಿ, ಬೀಳ್ಕೊಡಲಾಯಿತು. ಸನ್ಮಾನವನ್ನು ಸ್ವೀಕರಿಸಿದರು. ವಿಶ್ರಾಂತ ಶಿಕ್ಷಕ ಬಾಲಚಂದ್ರ ಎನ್ ನಾಯಕ, ವಿಶ್ರಾಂತ ಶಿಕ್ಷಕಿ ಪಾರ್ವತಿ ಟಿ ನಾಯಕ ಅಭಿನಂದನಾ ಮಾತುಗಳ ನ್ನಾಡಿದರು.

ಸಂಘದ ಪ್ರಧಾನ ಕಾರ್ಯದರ್ಶಿ ರಾಜು ಎಚ್ ನಾಯಕ ಸ್ವಾಗತಿಸಿದರು. ಉಪಾಧ್ಯಕ್ಷ ಮಂಜುನಾಥ ವೆಂಕಟರಮಣ ನಾಯಕ ವಂದಿಸಿದರು. ಶಿಕ್ಷಕರ ಸಂಘದ ಉಪಾಧ್ಯಕ್ಷೆ ಭಾರತಿ ನಾಯಕ, ತುಕಾರಾಮ ಬಂಟ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಘದ ಪದಾಧಿಕಾರಿಗಳಾದ ದಿವಾಕರ ದೇವನ ಮನೆ, ಆನಂದು ವಿ ನಾಯಕ, ವಿನಾಯಕ ಪಿ ನಾಯಕ, ಶೋಭಾ ಎಸ್ ನಾಯಕ, ವೆಂಕಮ್ಮಬಿ ನಾಯಕ, ಸೇರಿದಂತೆ ಸನ್ಮಾನಿತರ ಕುಟುಂಬದ ಸದಸ್ಯರು ತಾಲೂಕಿನ ಶಿಕ್ಷಕರು ಬಹು ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

ಚಲಿಸುತ್ತಿದ್ದ ಟ್ರ್ಯಾಕ್ಟರ್‌ನಿಂದ ಬಿದ್ದು ಯುವಕ ಸಾವು

ಮುಂಡಗೋಡ: ಚಲಿಸುತ್ತಿದ್ದ ಟ್ರ್ಯಾಕ್ಟರ್ ಮೇಲಿನಿಂದ ಬಿದ್ದು ಯುವಕನೋರ್ವ ಸಾವನ್ನಪ್ಪಿದ ಘಟನೆ ತಾಲೂಕಿನ ನಂದಿಕಟ್ಟಾ ಗ್ರಾಮದ ಬಳಿ ಮಂಗಳವಾರ ನಡೆದಿದೆ. ನಂದಿಕಟ್ಟಾ ಗ್ರಾಮ ಪಂ. ವ್ಯಾಪ್ತಿಯ ಹುಲಿಹೊಂಡ ಗ್ರಾಮದ ಸತೀಶ ಮಂಜುನಾಥ ತಳವಾರ(18) ಎಂಬಾತನೆ ಸಾವನ್ನಪ್ಪಿದ ಯುವಕ. ಅರಣ್ಯ ಸ್ಯವಾಲನಾ ಕೇಂದ್ರದಿಂದ ಹುಲಿಹೊಂಡ ಗ್ರಾಮದ ಅರಣ್ಯ ಪ್ರದೇಶಕ್ಕೆ ಗಿಡಗಳನ್ನು ಸಾಗಿಸುವ ಸಂದರ್ಭದಲ್ಲಿ ಮಾರ್ಗ ಮಧ್ಯೆ ಈ ಘಟನೆ ಸಂಭವಿಸಿದೆ. ಗಂಭೀರವಾಗಿ ಗಾಯಗೊಂಡ ಯುವಕನಿಗೆ ತಾಲೂಕಾ ಆಸ್ಪತ್ರೆಗೆ ದಾಖಲಿಸುವ ವೇಳೆ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ. ಮುಂಡಗೋಡ ಪೊಲೀಸ್ ಠಾಣೆಯಲ್ಲಿ,ಪ್ರಕರಣ ದಾಖಲಾಗಿದೆ.

ಮುಂಡಗೋಡ: ಶಾಸಕ ಶಿವರಾಮ್ ಹೆಬ್ಬಾರ್ ರವರ 68 ನೇ ಹುಟ್ಟುಹಬ್ಬದ ಅಂಗವಾಗಿ, ತಾಲೂಕಾ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಬುಧವಾರ ಇಲ್ಲಿಯ ತಾಲೂಕಾ ಆಸ್ಪತ್ರೆಯ ಒಳ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು. ತಾಲೂಕಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣ ಹಿರೇಹಳ್ಳಿ, ಹಿರಿಯ ಮುಖಂಡರಾದ ರವಿಗೌಡ ಪಾಟೀಲ್, ಆಡಳಿತ ವೈದ್ಯಾಧಿಕಾರಿ ಸ್ವರೂಪರಾಣಿ ಪಾಟೀಲ, ಜ್ಞಾನದೇವ ಗುಡಿಯಾಳ, ದೇವು ಪಾಟೀಲ್, ಧರ್ಮರಾಜ್ ನಡಗೇರಿ, ನಾಗರಾಜ ನಾಯ್ಕ, ಪಟ್ಟಣ ಪಂಚಾಯತಿ ಉಪಾಧ್ಯಕ್ಷೆ ರಹಿಮಾಬಾನು ಕುಂಕೂರ, ಸದಸ್ಯ ಶೇಖರ್ ಲಮಾಣಿ, ಅಹ್ಮದ್ ರಜಾ, ನಂದಿಗಟ್ನಾ ಗ್ರಾಪಂ ಅಧ್ಯಕ್ಷ ಸಂತೋಷ ಭೋಸಲೆ, ಪಿಎಲ್ಡಿ ಬ್ಯಾಂಕ್ ಅಧ್ಯಕ್ಷ ವೈ.ಪಿ.ಭುಜಂಗಿ, ರಾಜು ಗುಬ್ಬಕ್ಕನವರ್ ಸೇರಿದಂತೆ ಹಲವು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಈ ವೇಳೆ ಉಪಸ್ಥಿತರಿದರು.

JM FINANCIAL
ಜೆಎಂ ಫೈನಾನ್ಶಿಯಲ್ ಅಸೆಟ್ ರಿಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್
ಕಾರ್ಪೊರೇಟ್ ಗುರುತಿನ ಸಂಖ್ಯೆ U67190MH2007PLC74287
ನೋಂದಾಯಿತ ಕಚೇರಿ: 7ನೇ ಮಹಡಿ, ಸಿನರ್ಜಿ, ಅಪ್ಪಾಸಾಹೇಬ್ ಮರಾಠೆ ಮಾರ್ಗ ಪ್ರಭಾದೇವಿ, ಮುಂಬೈ-400025. ವೆಬ್‌ಸೈಟ್: www.jmfinancialarc.com
ಸಂಪರ್ಕ ವ್ಯಕ್ತಿ: 1. ಮಲ್ಲಿಕಾರ್ಜುನ್ ಜಿ ಹಾದಗಲಿ-9620686817. 2. ವಿಶಾಲ್ ಕಿಟಲೆ-9584966653, 3. ಪ್ರಶಾಂತ್ ಮೊಂಡೆ : 022-6224 1676
ಇ-ಹರಾಜು ಮಾರಾಟ ಸೂಚನೆ. – ಸಂತಕರದ ಮಾರಾಟ
ಪಿರಮಲ್ ಕ್ಯಾಪಿಟಲ್ ಅಂಡ್ ಹೌಸಿಂಗ್ ಫೈನಾನ್ಸ್ ಲಿ., (ಈ ಮೊದಲು ದಿವಾನ್ ಹೌಸಿಂಗ್ ಅಂಡ್ ಫೈನಾನ್ಸ್ ಕಾರ್ಪೊರೇಷನ್ ಲಿ. ಎಂದಾಗಿತ್ತು) ಸಾಲದ ಖಾತೆಗಳನ್ನು (ಈ ಕೆಳಗೆ ನಮೂದಿಸಿದ ಸಾಲಗಳು ಸೇರಿದಂತೆ) ಒಟ್ಟಾಗಿ ಈ ಕೆಳಗಿನ ಭದ್ರತಾ ಹಿತಾಸಕ್ತಿಯನ್ನು ಉಂಟುಮಾಡಿ ಸಂತಾ ಜೊತೆಗೆ ಎಲ್ಲಾ ಹಕ್ಕುಗಳು, ಟೈಟಲ್ ಮತ್ತು ಹಿತಾಸಕ್ತಿಗಳನ್ನು ಸೆಕ್ಷನ್ 5 (1) (ಬಿ) ರ ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ, 2002 ("ಸರ್ಫೇಸಿ ಕಾಯಿದೆ") ಅಡಿ